ಬೆಳಗ್ಗೆಯೇ ಬೈಯುವುದು ಬೇಡ ಎಂದುಕೊಂಡಳು. 'ಖಂಡಿತ ಹೊಡೆಯುತ್ತೆ ಪುಟ್ಟ. ಈಗ ಅಮ್ಮನಿಗೆ ನಿದ್ದೆ ಬರ್ತಾ ಇದೆ. ನೀನು ಹೋಗಿ ಮಲಗು' ಎಂದಳು.

ಅವಳಿಗೆ ನಿದ್ದೆ ಹತ್ತಲಿಲ್ಲ. ಮಗನು ಶಾಲೆಗೆ ಹೋಗಲು ತೋರುತ್ತಿರುವ ಸಂಭ್ರಮ ಅವಳಿಗೆ ಮುದ ಉಂಟುಮಾಡಿತ್ತು. ಅಷ್ಟರಲ್ಲೇ ಅವಳ ಮಗ ಗಡಿಯಾರದ ಸಮೇತ ಮತ್ತೆ ಪ್ರತ್ಯಕ್ಷನಾದ. 'ಅಮ್ಮ, ಇನ್ನು ಒಂದು ನಿಮಿಷಕ್ಕೆ ಅಲಾರಾಂ ಹೊಡೆಯುತ್ತೆ, ಏಳಮ್ಮ' ಎಂದು ಅದನ್ನು ಮಂಪರುಗಣ್ಣಿನಲ್ಲಿದ್ದ ಅವಳ ದಿಂಬಿನ ಮೇಲೆ ಇಟ್ಟ. ಹಗಲುಗನಸನ್ನು ಕಾಣುತ್ತಿದ್ದವಳನ್ನು ಗಡಿಯಾರದ ಗಂಟೆ ಹೊಡೆದು ಎಬ್ಬಿಸಿತು.

ಶಾಲೆಗೆ ತಯಾರಾಗುವಾಗ, ತಿಂಡಿ ತಿನ್ನುವಾಗ, 'ಹಿಂದಿನ ರಾತ್ರಿ ಗಡಿಯಾರದ ಟಿಕ್ ಟಿಕ್ ಶಬ್ದದಿಂದ ತನಗೆ ಹೇಗೆ ನಿದ್ದೆ ಬರಲಿಲ್ಲ; ಅರ್ಧ ಗಂಟೆಗೊಮ್ಮೆ ಎದ್ದು ಗಡಿಯಾರವನ್ನು ಹೇಗೆ ನೋಡುತ್ತಿದ್ದೆ' ಎಂಬುದನ್ನು ವರ್ಣಿಸಿದ. ತಾಯಿಗೆ ತನ್ನ ಮಗ ಶಾಲೆಗೆ ಸಮಯಕ್ಕೆ ಸರಿಯಾಗಿ ಹೋಗಲು ಪಟ್ಟ ಈ ಪ್ರಯತ್ನವು ದೇಶವನ್ನು ಕಾಯಲು ರಾತ್ರಿಯೆಲ್ಲ ಎಚ್ಚರದಿಂದ ಇರುವ ಯಾವುದೇ ಸೈನಿಕನ ಕಾರ್ಯಕ್ಕೆ ಸರಿಸಮನಾಗಿ ಕಂಡು ಬಂತು. ಅವನನ್ನು ತಬ್ಬಿ ಮುದ್ದಿಸಿದಳು. 'ಅಮ್ಮ, ಯೂನಿಫಾರಂ ಐರನ್ ಎಲ್ಲಾ ಹೋಗುತ್ತೆ, ಬಿಡು' ಎಂದು ಅವನು ಅವಳನ್ನು ಪಕ್ಕಕ್ಕೆ ತಳ್ಳಿದ. ಅವಳಿಗೆ ಅದರಲ್ಲೂ ಒಂದು ಹಿತವಿತ್ತು.

ಮಗ ಶಾಲೆಯಿಂದ ಹಿಂದಿರುಗುವುದನ್ನೇ ಕಾಯುತ್ತಾ ಗಡಿಯಾರವನ್ನು ನೋಡುತ್ತಿದ್ದಳು. 'ಮೊದಲ ದಿನ ಹೊಸ ಕ್ಲಾಸ್ ಹೇಗಿತ್ತೋ!?'

'ಚೆನ್ನಾಗಿತ್ತಮ್ಮ. ಹೊಸ ಟೀಚರ್ ತುಂಬಾ ಸ್ಟ್ರಿಕ್ಟ್, ಕಣಮ್ಮ. ನೀನು ನನ್ನ ಡಾಕ್ಟರ್ ಹತ್ರ ಕರೆದುಕೊಂಡು ಹೋಗಬೇಕಂತೆ. ಏನೋ ಬರ್ದಿದ್ದಾರೆ, ಡೈರಿಯಲ್ಲಿ ನೀನೇ ನೋಡು' ಎಂದು ತನ್ನ ಚೀಲವನ್ನು ಅವಳ ಕೈಗೆ ಕೊಟ್ಟು, ಗೆಳೆಯರೊಡನೆ ಆಡಲು ಓಡಿದ.

ತಾಯಿ ಆತಂಕದಿಂದ ಡೈರಿ ತೆರೆದಳು.

1. ಮಗುವಿನ ಕಣ್ಣುಗಳು ಕೆಂಪಾಗಿವೆ. ಡಾಕ್ಟರ್‌ಗೆ ತೋರಿಸಿಬಿಡಿ.

2. ಇಂದು ಎಲ್ಲಾ ತರಗತಿಗಳಲ್ಲೂ ತೂಕಡಿಸುತ್ತಾ ಇದ್ದ.

3. ಊಟದ ಅನಂತರ ನಿದ್ದೆ ಮಾಡುತ್ತಿದ್ದ ಅವನನ್ನು ಅಲ್ಲಾಡಿಸಿ ಎಬ್ಬಿಸಬೇಕಾಯಿತು.

4. ರಾತ್ರಿ ಹೊತ್ತು ಮೊಬೈಲ್, ಟೀವಿ ನೋಡಲು ಬಿಡಬೇಡಿ.

ಇದನ್ನು ಓದಿ, ಅವಳ ಕಣ್ಣಿನಿಂದ ಬಂದ ನೀರಿನ ಹನಿಯಲ್ಲಿ ಐನ್‌ಸ್ಟೀನ್, ಬಿಲ್ ಗೇಟ್ಸ್ ಎಲ್ಲಾ ಮುಳುಗಿ ಹೋಗಿದ್ದರು. ಮಗನ ಆ ಪರಿಸ್ಥಿತಿಗೆ ಕಾರಣ ಅವಳಿಗೆ ಚೆನ್ನಾಗಿ ಗೊತ್ತಿದ್ದರಿಂದ, ತನಗೆ ತಾನೇ ಸಮಾಧಾನ ಮಾಡಿಕೊಂಡಳು. ಅವಳ ಹಗಲುಗನಸುಗಳು ಅವಳಿಗೆ ಬಹಳವೇ ಆಪ್ಯಾಯಮಾನವಾಗಿದ್ದವು. ಅದು ಇತರ ದಿನನಿತ್ಯದ ಜಂಜಡದ ನಡುವೆ ಓಯಸಿಸ್ ಇದ್ದಂತೆ. ಹೀಗೆ ಗಂಟೆ ಹೊಡೆದು ತನ್ನ ಹಗಲುಗನಸುಗಳನ್ನು ನಿಲ್ಲಿಸುವ ಪ್ರಯತ್ನಗಳ ಬಗ್ಗೆ ಎಚ್ಚರಿಕೆಯಿಂದ ಇದ್ದು ಅದರಿಂದ ವಿಮುಖಳಾಗಬಾರದು ಎಂದು ನಿಶ್ಚಯಿಸಿಕೊಂಡಳು. ಅವು ತನ್ನ ಮಗನು ಮುಟ್ಟಬೇಕೆಂದು ತಾನು ಬಯಸುವ ಸುಪ್ತ ಗುರಿಗಳನ್ನು ತೋರಿಸುವ ಗುಪ್ತಗಾಮಿನಿಗಳು. ಅಂಥ ಗಂಟೆಗಳನ್ನು 'ತಾನು ಹಗಲುಗನಸುಗಳನ್ನು ಕಾಣುವುದಕ್ಕೆ ಹೊಡೆದ ಗಂಟೆ' ಎಂದು ಭಾವಿಸಲು ನಿರ್ಧರಿಸಿದಳು. ಇನ್ನಷ್ಟು ಹಗಲುಗನಸುಗಳನ್ನು ಕಂಡು, ಅದರಿಂದ ಉದ್ಭವಿಸುವ ತನ್ನ ಮಹಾನಿರೀಕ್ಷೆಗಳನ್ನು ನಿಜ ಮಾಡಲು ಮಾರ್ಗವನ್ನು ಹುಡುಕುವ ಪಣತೊಟ್ಟು ದೃಢತೆಯಿಂದ ಮೇಲೆದ್ದಳು.

ಪ್ರತಿಕ್ರಿಯಿಸಿ: feedback@sudha.co.in



# ಹೊಸ ಭಾಷಾ ಕಲಿಕೆ; ನಗರಿಗರಲ್ಲಿ ಉತ್ಸಾಹ

ಹೊಸ ಭಾಷೆಯ ಕಲಿಕೆಯಲ್ಲಿ ಭಾರತದ ನಗರವಾಸಿಗಳು ಹೆಚ್ಚು ಉತ್ಸುಕರಾಗಿದ್ದು, ಕಳೆದ ಎರಡು ವರ್ಷಗಳಲ್ಲಿ, ಭಾಷೆ ಕಲಿಯುವ ಉತ್ಸಾಹಿಗಳ ಸಂಖ್ಯೆ ಏರಿಕೆಯಾಗಿರುವುದಾಗಿ ಸಮೀಕ್ಷೆಯೊಂದು ತಿಳಿಸಿದೆ.

ಎರಡು ವರ್ಷಗಳಿಂದೀಚೆ ಅರ್ಧದಷ್ಟು ಭಾರತೀಯ ನಗರವಾಸಿಗಳು ಹೊಸ ಭಾಷೆಯನ್ನು ಕಲಿತಿದ್ದಾರೆ ಎಂದು ಭಾಷಾ ಕಲಿಕೆಯ ವೇದಿಕೆ 'ಡ್ಯುಯೊಲಿಂಗೊ' ನಡೆಸಿದ ಸಮೀಕ್ಷೆ ಉಲ್ಲೇಖಿಸಿದೆ. ಹೊಸ ಭಾಷೆಯನ್ನು ಕಲಿಯುವುದು ಪಟ್ಟಣ ಪ್ರದೇಶಗಳಲ್ಲಿ ಒಂದು ಜನಪ್ರಿಯ ಪ್ರವೃತ್ತಿಯೂ ಆಗಿದ್ದು, ಈ ಪ್ರವೃತ್ತಿ ದೀರ್ಘ ಕಾಲ ಮುಂದುವರೆಯುವುದಾಗಿಯೂ ಸಮೀಕ್ಷೆ ತಿಳಿಸಿದೆ.

ಭಾಷಾ ಕಲಿಕೆಯನ್ನು ತಂತ್ರಜ್ಞಾನ ಸುಲಭಗೊಳಿಸಿದ್ದು, ಹೊಸ ಭಾಷೆಯೊಂದನ್ನು ಕಲಿಯುವ ಪ್ರಕ್ರಿಯೆ ಹಿಂದೆಂದಿಗಿಂತಲೂ ಸರಳ, ಸುಲಭವಾಗಿದೆ ಎಂದು ಹೇಳಲಾಗಿದೆ. ಸಮೀಕ್ಷೆಯಲ್ಲಿ ಇನ್ನಷ್ಟು ಆಸಕ್ತಿದಾಯಕ ವಿಷಯಗಳಿವೆ.

- ಶೇ. 60ರಷ್ಟು ಭಾರತ ನಗರವಾಸಿಗಳು ವ್ಯಾಕರಣ ಹಾಗೂ ಕಠಿಣ ಭಾಷಾ ಕಲಿಕೆಯ ಕೌಶಲಗಳನ್ನು ಹೊಂದಿದ್ದಾರೆ. ಅವರಲ್ಲಿ ಶೇ. 83ರಷ್ಟು ಜನರು, ಮಾತನಾಡುವುದು ಹಾಗೂ ಗಮನವಿಟ್ಟು ಆಲಿಸುವುದು ಹೊಸ ಭಾಷೆಯನ್ನು ಕಲಿಯಲು ಪರಿಣಾಮಕಾರಿ ತಂತ್ರ ಎಂದು ತಿಳಿಸಿದ್ದಾರೆ.
- ಶೇ. 58ರಷ್ಟು ನಗರವಾಸಿಗಳು ಆಡಿಯೊ ಪಾಠಗಳು ಹಾಗೂ ದೃಶ್ಯ, ವಿಡಿಯೊಗಳ ಮೂಲಕ ಹೊಸ ಭಾಷೆ ಕಲಿತಿರುವುದಾಗಿ ತಿಳಿಸಿದ್ದಾರೆ.
- ಹೊಸ ಭಾಷೆಯನ್ನು ಕರಗತ ಮಾಡಿಕೊಳ್ಳಲು ಪ್ರತಿ 5ರಲ್ಲಿ 4 ಜನರು ವಾರಕ್ಕೊಮ್ಮೆಯಾದರೂ ಭಾಷಾ ಕಲಿಕೆಯ ಆ್ಯಪ್, ಆನ್‌ಲೈನ್ ಕೋರ್ಸ್ ಹಾಗೂ ಇತರ ಡಿಜಿಟಲ್ ಸಾಧನಗಳನ್ನು ಬಳಸುವುದಾಗಿ ತಿಳಿಸಿದ್ದಾರೆ.
- ಡಿಜಿಟಲ್ ಕಲಿಕೆಯಲ್ಲಿ, ಗೇಮಿಫಿಕೇಷನ್ ಮತ್ತು ರಿವಾರ್ಡ್‌ಗಳು, ಭಾಷಾ ಕಲಿಕೆಯ ಅನುಭವವನ್ನು ವಿನೋದವಾಗಿಸುವ ಜೊತೆಗೆ ಪರಿಣಾಮಕಾರಿ ತಂತ್ರವಾಗಿರುತ್ತವೆ ಎಂದು ಸಮೀಕ್ಷೆ ತಿಳಿಸಿದೆ.
- ಒಂದು ಭಾಷೆಯ ಕಲಿಕೆಗೆ ಆಯಾ ಭಾಷೆಯ ಸಿನಿಮಾ ಅಥವಾ ಟೀವಿ ಕಾರ್ಯಕ್ರಮಗಳನ್ನು ನೋಡುವುದು ಸಹಾಯ ಮಾಡಿವೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಶೇ. 75ರಷ್ಟು ಮಂದಿ ತಿಳಿಸಿದ್ದಾರೆ.